ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

File No:DTE-ADMI0ACM2/ 81 /2021

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:06-07-2021.

**-:: ಸು ತ್ತೋ ಲೆ ::-**

**ವಿಷಯ:** 2020-21ನೇ ಸಾಲಿನ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ 02, 04 ಮತ್ತು 06ನೇ ಸೆಮಿಸ್ಟರ್ ತರಗತಿಗಳಿಗೆ ಮರುಪ್ರವೇಶ ಪಡೆಯಲು ಅಂತಿಮ ದಿನಾಂಕ ನಿಗಧಿಪಡಿಸುವ ಕುರಿತು.

**ಉಲ್ಲೇಖ:**
1. ಈ ಕಛೇರಿಯ ಸುತ್ತೋಲೆ ಸಂ: DTE-ADMIOACM2/69/2021, ದಿನಾಂಕ: 02-03-2021 (ಶೈಕ್ಷಣಿಕ ವೇಳಾಪಟ್ಟಿ).
2. ಈ ಕಛೇರಿಯ ಸುತ್ತೋಲೆ ಸಂ: DTE-ADMIOACM2/26/2020, ದಿನಾಂಕ: 08-10-2020.
3. ಸರ್ಕಾರದ ಆದೇಶ ಸಂ.ಇಡಿ 119 ಡಿಟಿಇ 2005, ದಿ:16-10-2005.
4. ಸರ್ಕಾರದ ಆದೇಶ ಸಂ.ಇಡಿ 64 ಟಿಪಿಇ 2016, ದಿ:21-06-2016.
5. ಸರ್ಕಾರದ ಪತ್ರ ಸಂ. ಇಡಿ 101 ಟಿಪಿಇ 2018, ದಿ:30-06-2018.

-0000000-

2020-21ನೇ ಸಾಲಿನಲ್ಲಿ **ರಾಜ್ಯದ ಎಲ್ಲಾ ಡಿಪ್ಲೋಮಾ ಕಾಲೇಜುಗಳಲ್ಲಿ ಸರ್ಕಾರದ ಆದೇಶದಲ್ಲಿನ ಪ್ರಮಾಣಿತ ಕಾರ್ಯಚರಣಾ ವಿಧಾನಗಳನ್ನು ಅಳವಡಿಸಿಕೊಂಡು ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿ,** ಪ್ರವೇಶ ಪಡೆದ ಅಭ್ಯರ್ಥಿಗಳಿಗೆ ನಿಗಧಿತ ಅವಧಿಯೊಳಗೆ ಪಾಠ ಪ್ರವಚನಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ 02, 04 ಮತ್ತು 06ನೇ ಸೆಮಿಸ್ಟರ್ ತರಗತಿಗಳ ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿಯನ್ನು ಉಲ್ಲೇಖ(1)ರ ಈ ಕಛೇರಿ ಸುತ್ತೋಲೆಯಲ್ಲಿ ಪ್ರಕಟಿಸಲಾಗಿತ್ತು. ಸದರಿ ಸುತ್ತೋಲೆಯಲ್ಲಿನ ಸೂಚನೆಗಳ ಪ್ರಕಾರ ಪಠ್ಯಕ್ರಮದನ್ವಯ ಪಾಠಪ್ರವಚನಗಳು ಮತ್ತು ಪ್ರಾಯೋಗಿಕ ತರಗತಿಗಳನ್ನು ನಿಗಧಿತ ಅವಧಿಯ ಒಳಗೆ ಮುಗಿಸುವಲ್ಲಿ ಎಲ್ಲಾ ರೀತಿಯ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

ಉಲ್ಲೇಖ(3) & (4)ರ ಸರ್ಕಾರದ ಆದೇಶಗಳ ಪ್ರಕಾರ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಯೆಗಳಲ್ಲಿನ ವಿದ್ಯಾರ್ಥಿಗಳು ಶಿಕ್ಷಣ ಶುಲ್ಕಗಳನ್ನು ಪಾವತಿಸುವ ಬಗ್ಗೆ ಈಗಾಗಲೇ ಮಾಹಿತಿಯನ್ನು ಉಲ್ಲೇಖ(2)ರ ಈ ಕಛೇರಿ ಸುತ್ತೋಲೆಯಲ್ಲಿ ನೀಡಲಾಗಿದೆ. ಮುಂದುವರಿದಂತೆ ಪ್ರಸ್ತುತ 02, 04 ಮತ್ತು 06ನೇ ಸೆಮಿಸ್ಟರ್ ಆನ್‌ಲೈನ್ ತರಗತಿಗಳು ಪ್ರಾರಂಭವಾಗಿದ್ದು 01, 03 ಮತ್ತು 05 ನೇ ಸೆಮಿಸ್ಟರ್ ತರಗತಿಗಳಿಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ಉಲ್ಲೇಖ(2)ರ ಸುತ್ತೋಲೆಯಲ್ಲಿನ ವಿನಾಯಿತಿಯನ್ನು ಪಡೆದುಕೊಂಡಂತಹ ವಿದ್ಯಾರ್ಥಿಗಳು ಪ್ರಸ್ತುತ ಬಾಕಿ ಇರುವ ಶೇ.50ರಷ್ಟು ಬೋಧನಾ ಶುಲ್ಕವನ್ನು **ದಿನಾಂಕ:15-07-2021ರ** ಒಳಗಾಗಿ ಪಾವತಿಸಲು ಸೂಚಿಸಲಾಗಿದೆ.

ಮುಂದುವರೆದು, 2020-21ನೇ ಶೈಕ್ಷಣಿಕ ಸಾಲಿನಲ್ಲಿ 02, 04 ಮತ್ತು 06ನೇ ಸೆಮಿಸ್ಟರ್ ತರಗತಿಗಳಿಗೆ **ಮರುಪ್ರವೇಶ**(Repeater) ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಕೆಳಕಂಡಂತೆ ಅಂತಿಮ ದಿನಾಂಕ ನಿಗಧಿಪಡಿಸಲಾಗಿದೆ. ನಿಗಧಿತ ಶುಲ್ಕಗಳನ್ನು ಉಲ್ಲೇಖ(2)ರಲ್ಲಿನ ಈ ಕಛೇರಿ ಸುತ್ತೋಲೆಯಲ್ಲಿನ ಶುಲ್ಕಗಳ ಧರದಲ್ಲಿ ಪೂರ್ಣ ಪ್ರಮಾಣದ ಶುಲ್ಕಗಳನ್ನು ಒಂದೇ ಕಂತಿನಲ್ಲಿ ಪಾವತಿಸಿ ಮರು ಪ್ರವೇಶ ಪಡೆಯುವುದು.

1. ದಿನಾಂಕ:**15–07–2021** ರವರೆಗೆ ಯಾವುದೇ ದಂಡ ಶುಲ್ಕವಿಲ್ಲದೆ ಅರ್ಹ ಶುಲ್ಕವನ್ನು ಮಾತ್ರ ಪಡೆದು ಪ್ರವೇಶ ನೀಡುವುದು.
2. ದಿನಾಂಕ:**24–07–2021** ರವರೆಗೆ ₹ 200/-ರ ದಂಡ ಶುಲ್ಕದೊಂದಿಗೆ ಅರ್ಹ ಶುಲ್ಕವನ್ನು ಪಾವತಿಸಿಕೊಂಡು ಪ್ರವೇಶ ನೀಡುವುದು.
3. ದಿನಾಂಕ:**03–08–2021** ರವರೆಗೆ ₹ 400/-ರ ದಂಡ ಶುಲ್ಕದೊಂದಿಗೆ ಅರ್ಹ ಶುಲ್ಕವನ್ನು ಪಾವತಿಸಿಕೊಂಡು ಪ್ರವೇಶ ನೀಡುವುದು.
4. ಅಂತಿಮವಾಗಿ ದಿ:**13–08–2021** ರವರೆಗೆ ₹ 1000/- ದಂಡ ಶುಲ್ಕದೊಂದಿಗೆ ಅರ್ಹ ಶುಲ್ಕವನ್ನು ಪಾವತಿಸಿಕೊಂಡು ಪ್ರವೇಶ ನೀಡುವುದು.

ಮೇಲ್ಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಪ್ರಾಂಶುಪಾಲರುಗಳು ನಿಯಮಗಳ ಪ್ರಕಾರ ಪ್ರವೇಶ ಪಡೆಯಲು ಅರ್ಹರಿರುವ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವುದು ನಿಯಮಗಳನ್ನು ಮೀರಿ ಪ್ರವೇಶಗಳನ್ನು ನೀಡಿದಲ್ಲಿ ಅಂತಹ ಪ್ರಕರಣಗಳಿಗೆ ಪ್ರಾಂಶುಪಾಲರುಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಪ್ರವೇಶ ಕೋರಿ ತಡವಾಗಿ ಸಲ್ಲಿಸುವ ಮನವಿಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಸಾಕಷ್ಟು ತಿಳುವಳಿಕೆ ನೀಡುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳುವುದು. ಈ ನಿಟ್ಟಿನಲ್ಲಿ ಯಾವುದೇ ಮನವಿಗಳನ್ನು ಆಯುಕ್ತಾಲಯಕ್ಕೆ ಕಳುಹಿಸದೆ ನಿಯಮಗಳ ಪ್ರಕಾರ ಪ್ರಿನ್ಸಿಪಾಲರ ಹಂತದಲ್ಲೇ ಇತ್ಯರ್ಥಗೊಳಿಸಬೇಕೆಂದು ತಿಳಿಸಲಾಗಿದೆ. ತರಗತಿಗಳನ್ನು ನಿಗಧಿತ ಅವಧಿಯಲ್ಲಿ ಪ್ರಾರಂಭಿಸಿ, ಪಠ್ಯಕ್ರಮಕ್ಕೆ ವಿಶೇಷ ತರಗತಿಗಳನ್ನು ತೆಗೆದುಕೊಂಡು ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಮುಕ್ತಾಯಗೊಳಿಸುವುದು.

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

***ಇವರಿಗೆ,***

*ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ – ಸೂಕ್ತ ಅನುಸರಣೆ ಹಾಗೂ ಮಾಹಿತಿಗಾಗಿ.*

ಪ್ರತಿ ಇವರಿಗೆ ಮಾಹಿತಿಗಾಗಿ:

1. ಮಾನ್ಯ ಆಯುಕ್ತರವರ ಆಪ್ತಶಾಖೆಗೆ.
2. ಮಾನ್ಯ ನಿರ್ದೇಶಕರವರ ಆಪ್ತಶಾಖೆಗೆ.
3. ಮಾನ್ಯ ಜಂಟಿ ನಿರ್ದೇಶಕರವರ ಆಪ್ತಶಾಖೆಗೆ.
4. ಕಾರ್ಯದರ್ಶಿಯವರ ಆಪ್ತಶಾಖೆಗೆ.
5. ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ.
6. ಇ–ಗವರ್ನೆನ್ಸ್ ವಿಭಾಗಕ್ಕೆ – ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
7. ಆರ್.ಡಿ.ಎಂ ವಿಭಾಗಗಳಿಗೆ.
8. ಇಆರ್‌ಎಸ್(3) ವಿಭಾಗಕ್ಕೆ.
9. ಕಛೇರಿ ಪ್ರತಿ.